
Azim Premji Foundation

Karnataka Field Institutes

# ಬಯಲು Bayalu

Issue No. 68

April 2018



...a space of our own



# Table of Contents

*Ardhanaarishwara- The concept we need to explore and imbibe - Peri .......... 2*

*ಸಾರಾ ಅಬೂಬಕ್ಕರ್ ಕಥೆಗಳಲ್ಲಿ 'ಸ್ತ್ರೀ' ಮತ್ತು 'ಶೋಷಣೆ' - **Siddu M Huded** .......... 4*

*Inspired by mother - Gururaja Budhya, .......... 5*

*ದಾಹ – ಮಾನಸ .......... 6*

*ನನ್ ಅಜ್ಜಿ.. –ಭರತ್ ಚವ್ಹಾಣ್ .......... 7*

*ನನ್ನವಳು –ಗಂಗಾಧರ ಸ್ವಾಮಿ ಎಸ್ .......... 8*

*ಬಾಹು ಪಾಶದ ಬೇನೆ ಶಿವಕುಮಾರ ಸಿ ಎಸ್ .......... 9*

*ಚಿದಂಬರ ರಹಸ್ಯ !! –ರಾಘವೇಂದ್ರ ಹೇರ್ಳೆ ಜಿ. .......... 11*

ಅದೇ ಬೆಳೆ ಈ ಹೊಲದಲಿ. -ಗಂಗಾಧರ ಸ್ವಾಮಿ ಎಸ್ .......... *13*

*ಬಾಲ್ಯ –ವಿನೋದ್ ಪಾಖರೆ .......... 16*





## Ardhanaarishwara- *The concept we need to explore and imbibe* - Peri



I was in my college when I first saw this sculpture of Ardhanaarishwara. Half male and half Female. First I laughed to this meaningless form. As Ardhanaarishwara- The concept we need to explore and imbibe - Peridays passed I got interested in this different image. I would be haunted with this image of half male and half female. Unlike Shiva, or for that matter dancing Balike. Not a common figure in temples. Later I got interested in this figure and started reading and understanding it. I should say that as I ventured deep into the concept I found that it was beyond my reach. It is very meaningful and creative. But, understanding it till today I am nowhere near it. I have started appreciating the concept, and it has started to haunt me more than any time before.

Let us keep aside the stories, puranas and legends on this. They do not help us at all. But, the concept of a complete human being is what has been attempted. A human being who has all the characteristics of male and female. Everything inside you, the left and the right. The soft and the hard. The sophisticated grace and raw assertion. The ferocious lion for the Shakthi and the meek bullock for the Shiva. What a combination and what a balance, the highest form of equilibrium. The concept itself is very creative and of higher order.

Why might have they created this figure and exhibited it in public spaces? Why have they created it as highest form of worshiping deity? What can we take away from this figure? When both are equal it is complete. The first thing is that both are equal. Man and woman. When both are together there is completion and there is creation. Men and women are made to live together….!

The creation of Ardhanaarishwara is well thought of. The artist has given equal status to man and woman. He has not put down anybody nor has raised anyone to a higher status than the other. It is not the better half nor the other half. It is one's own half, one's own part!

This knowledge that both are my parts, both are inside me… is a very powerful knowledge. We have wrongly stressed on one single part either male or the female. Forgetting completely that there is a male inside the female and there is a female inside every male. This is such a holistic and complete understanding that it will revolutionize our attitude and the way of life. It will create a different order. It will make women stronger. It will make men softer. It will make all men and women independent, free and sensitive. Here you are part of the whole. There is no better part or the weaker part, no other half. Everything is your part. There is no difference in the part, everything that is there is you!

This concept was created long… long back. But, we have neglected it. We have forgotten it, we have by design destroyed it. And the result is the skewed society that has come to be. Completely male dominated. We have come to a stage where we have no future. We are doomed to destruction. We have built in ourselves this one sided figure which is half and incomplete and distorted. We are glorifying this ugly figure and miserably struggling. We have bound ourselves with this ugly and dangerous one sided image. We do not see the path towards emancipation! Feeling ourselves and becoming total human beings. Can we start thinking afresh? Can we start thinking of becoming more sensitive, more humane? Can we start finding the other half which is neglected and lost in us? Can we start understanding this concept of Ardhanaarishwara! Can we as men become more aware of our feminine elements that is there inside us. Can we females become more aware of our manly nature. Can we become both sensitive and strong? Can we both become more rational and emotional? Can we become both hard and soft? Can we be both the receiver and the giver? can we be the complete person with both the masculine and the feminine characteristics?

This will require us to stop this maddening race and pause. Pause and look inward. Into ourselves. This will require me to look into myself. This will force me to find things inside me which I had been completely blind to. Can I be more sensitive to my own feelings, emotions. This will want me to look at others and deeper into their self, their personality and respond sensitively. If we can do that, we might find those neglected ourselves. We might be able to unearth the deep buried feelings, emotions and characteristics of ours. We will be able to become a healthier person, more complete persons, more independent, more interdependent and more creative persons. We can start the journey of becoming complete human beings. The concept is that all of us, men and women are Ardhanaarishwars. Can we build ourselves in to that all powerful and highly sensitive, complete human beings and live as Ardhanarishwars!

## ಸಾರಾ ಅಬೂಬಕ್ಕರ್ ಕಥೆಗಳಲ್ಲಿ 'ಸ್ತ್ರೀ' ಮತ್ತು 'ಶೋಷಣೆ'

- Siddu M Huded

ಸಾ. ರಾ. ಅಬೂಬಕ್ಕರ್ ಕನ್ನಡದ ಮಹಿಳಾ ಬಂಡಾಯ ಲೇಖಕಿಯರಲ್ಲಿ ಎದ್ದು ಕಾಣುವ ಹೆಸರು. ಕಂಡದ್ದನ್ನು ಇರುವ ಹಾಗೆ ಭಯವಿಲ್ಲದೆ ಬರೆಯುವ ಇವರು ಸಮಾಜದಲ್ಲಿ ನಡೆಯುವ ವರದಕ್ಷಿಣೆ, ಸ್ತ್ರೀ ಶೋಷಣೆ, ಬಹುಪತ್ನಿತ್ವ, ತಲಾಖನಂತಹ ಸಾಮಾಜಿಕ ಪಿಡಗುಗಳ ವಿರುದ್ಧ ಲೇಖನದ ಮೂಲಕ ಸಾಮಾಜಿಕ ಅರಿವನ್ನು ಮೂಡಿಸುವ ಪ್ರಯತ್ನ ಮಾಡಿದ್ದಾರೆ. ಮುಸ್ಲಿಂ ಸಮುದಾಯದ ಸಂವೇದನೆಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಸೇರ್ಪಡೆಗೊಳಿಸಿದವರಲ್ಲಿ ಪ್ರಮುಖರಾದ ಸಾರಾ ಹುಟ್ಟಿದ್ದು ಕಾಸರಗೋಡಿನಲ್ಲಾದರೂ ತಮ್ಮನ್ನು ಗುರ್ತಿಸಿಕೊಳ್ಳುವುದು ಕನ್ನಡ ಲೇಖಕಿಯೆಂದೇ.

'ಎಲ್ಲಿ ಸ್ತ್ರೀಯರು ಪೂಜಿಸಲ್ಪಡುತ್ತಾರೋ, ಅಲ್ಲಿ ದೇವತೆಗಳು ರಮಿಸುತ್ತಾರೆ' ಎಂಬ ಪ್ರಾಚೀನ ಉಕ್ತಿಯಿದೆ ಆದರೆ ಭಾರತೀಯ ಸಮಾಜದಲ್ಲಿ ಇಂದಿಗೂ ಸ್ತ್ರೀ ಶೋಷಣೆ, ವರದಕ್ಷಿಣೆ, ಸ್ತ್ರೀ ಭ್ರೂಣಹತ್ಯೆಯಂತಹ ಪಿಡುಗುಗಳು ಕಡಿಮೆಯಾಗಿಲ್ಲ. ಮಹಿಳೆಯರ ವಿರುದ್ಧದ ಲಿಂಗ ತಾರತಮ್ಯ ಅನಾದಿ ಕಾಲದಿಂದಲೂ ಬೆಳೆದುಕೊಂಡು ಬಂದಿದೆ. ಮಹಿಳೆ ಜನಿಸಿದ ತಕ್ಷಣವೇ ಅವಳು ಪ್ರದರ್ಶಿಸುವ ಗುಣಗಳನ್ನು ಲೆಕ್ಕಿಸದೆಯೇ ಅವಳ ಸಾಧ್ಯತೆಗಳನ್ನು ಸೀಮಿತಗೊಳಿಸುವುದನ್ನು ಜನರು ಪ್ರಾರಂಭಿಸುತ್ತಾರೆ ಆದ್ದರಿಂದ ನಾಗರೀಕತೆಯ ಆರಂಭದಿಂದಲೂ ಮಹಿಳೆಯರು ಲಿಂಗಭೇದಭಾವ, ಅವನತಿ, ದಬ್ಬಾಳಿಕೆ ಮತ್ತು ಅವರ ಲಿಂಗಗಳ ಕಾರಣದಿಂದ ಅಮಾನವೀಯ ಚಿಕಿತ್ಸೆಗಳ ಎಲ್ಲಾ ಸ್ವರೂಪಗಳನ್ನು ಅನುಭವಿಸಿದ್ದಾರೆ. ಇಂತಹ ಸಾಮಾಜಿಕ ಪಿಡುಗುಗಳ ಬಗ್ಗೆ ಧ್ವನಿ ಎತ್ತಿದವರಲ್ಲಿ ಅಬೂಬಕರ್ ಒಬ್ಬರು.

ಸಾ. ರಾ. ಅಬೂಬಕ್ಕರ್ ಅವರ ಕಾದಂಬರಿಗಳಾದ 'ಚಂದ್ರಗಿರಿಯ ತೀರದಲ್ಲಿ', 'ತಳ ಒಡೆದ ದೋಣಿಯಲಿ, 'ವಜ್ರಗಳು, 'ಕದನ ವಿರಾಮ, 'ಸುಳಿಯಲ್ಲಿ ಸಿಕ್ಕವರು, 'ಸಹನಾ' ಗಳಲ್ಲಿ ಮುಸ್ಲಿಂ ಮಹಿಳಾ ಸಂವೇದನೆಗಳನ್ನು ಕಟ್ಟಿಕೊಟ್ಟಿದ್ದಾರೆ. ಇದರಲ್ಲಿ ಬಹುಪಾಲು ಕೃತಿಗಳ ಅವರು ಮುಸ್ಲಿಂ ಸಮಾಜದಲ್ಲಿ ಕಂಡುಂಡ ನೋವು ಹಾಗೂ ತಾರತಮ್ಯಗಳ ಚಿತ್ರಣವಾಗಿದೆ. ಸಾ. ರಾ. ಅಬೂಬಕ್ಕರ್ ಅವರ 'ಸಹನಾ' ಕಾದಂಬರಿಯು ನೈಜಕಥೆಯನ್ನೊಳಗೊಂಡಿದ್ದು, ಈ ಕಥೆಯಲ್ಲಿ ಬರುವ 'ಸಕಿನ್' ಪಾತ್ರವು ಸಮಾಜದಲ್ಲಿ ಹೆಣ್ಣಿನ ಮೇಲೆ ನಡೆಯುತ್ತಿರುವ ದೌರ್ಜನ್ಯ ಮತ್ತು ಬಹುಪತ್ನಿತ್ವದಂತಹ ಸಾಮಾಜಿಕ ಪಿಡುಗುಗಳ ಮೇಲೆ ಬೆಳಕು ಚೆಲ್ಲುತ್ತದೆ. ನಡುವೆಯೇ ಹೆಂಡತಿಯನ್ನು ಬಿಟ್ಟು ಹೋದ ಗಂಡ, ಮಗಳ

ಜವಾಬ್ದಾರಿ, ಬಡತನ, ತಾತ್ಸಾರ, ಸಂಸಾರ ಇಂತಹ ಹಲವಾರು ನೈಜ ಘಟನೆಗಳನ್ನು 'ಸಹನಾ'ದಲ್ಲಿ ಅಬೂಬಕರ್ ಅವರು ಕಟ್ಟಿಕೊಟ್ಟಿದ್ದಾರೆ.

'ವಜ್ರಗಳು' ಕಾದಂಬರಿಯಲ್ಲಿ ಬರುವ 'ನಫೀಸಳ ಪಾತ್ರವು ಕೂಡಾ ಪುರುಷಪ್ರಧಾನ ಸಮಾಜದ ಕೌರ್ಯವನ್ನು, ಹೆಣ್ಣಿನ ಮೇಲೆ ನಡೆಯುವ ದಬ್ಬಾಳಿಕೆಯನ್ನು ಎತ್ತಿ ತೋರಿಸುತ್ತದೆ. ಇನ್ನು ಚಪ್ಪಲಿಗಳು ಕಥೆಯಲ್ಲಿ ಬರುವ 'ಸಮೀರ'ಳ ಪಾತ್ರವು ಹೆಣ್ಣನ್ನು ಕೇವಲ ಸ್ವಾರ್ಥಕ್ಕಾಗಿ ಉಪಯೋಗಿಸುವ ಸಮಾಜದ ಮೇಲೆ ನೋಟ ಚೆಲ್ಲುತ್ತದೆ ಹೀಗೆ ಅಬೂಬಕ್ಕರ್ ಅವರ ಎಲ್ಲ ಕಾದಂಬರಿಗಳು ಮತ್ತು ಕಥೆಗಳು ಸ್ತ್ರೀ ಧೋರಣೆಯನ್ನು ಮತ್ತು ಧರ್ಮದ ಹೆಸರಿನಲ್ಲಿ ನಡೆಯುವ ಸ್ತ್ರೀ ಶೋಷಣೆಯನ್ನು ಸರಳವಾಗಿ ಮತ್ತು ಮನಮುಟ್ಟುವಂತೆ ಚಿತ್ರಿಸಿಕೊಟ್ಟಿದ್ದಾರೆ.

ಸಾ. ರಾ. ಅಬೂಬಕರ್ ಅವರ ಇಂತಹ ಬರವಣಿಗೆಗೆ ಹುಡಿಕಿಕೊಂಡು ಬಂದ ಪ್ರಶಸ್ತಿಗಳು-ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ, ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ, ಕ.ಸಾ.ಪ.ನ.ಬಿ. ಸರೋಜಾದೇವಿ ಪ್ರಶಸ್ತಿ, ಸಹನಾ ಕಾದಂಬರಿಗೆ ವರ್ಧಮಾನ ಪ್ರಶಸ್ತಿ, ಸುಳಿಯಲ್ಲಿ ಸಿಕ್ಕವರು ಕೃತಿಗೆ ಮಾತೋಶ್ರೀ ರತ್ನಮ್ಮ ಹೆಗ್ಗಡೆ ಪ್ರಶಸ್ತಿ ಮತ್ತು ಸಂದೇಶ ಪ್ರಶಸ್ತಿ, ಅನುಪಮ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಇತ್ತೀಚೆನದು-ಹಂಪಿ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದುವುಗಳು.

## Inspired by mother

- Gururaja Budhya,

I remember my childhood spent in the villages. Remembering childhood provides vivid memories of the houses lived, places visited, and games played with friends. One person whom I spent maximum time till the completion of college is my mother. She has been very keen that we go to school regularly during the day, go to tuitions in the morning and evening, learn singing and be disciplined – my mother. My mother has been a strict person with us about self-discipline, taking care of ourselves, not depend on others etc. She doesn't mince words when it comes to saying things as they are, express frankly and boldly, make sure we understand all that is being told as it is.

> Taking care of complete household responsibility fell on my mother, after my father is transferred to an auditing responsibility with the bank that he has been working. It means, taking care of us, house hold management, our admissions into schools and colleges, maintaining cordial relationship with relatives – almost for nine years.
>
> She has never differentiated between all our siblings, sisters and myself. She made sure that all siblings are equal. She guided we respect each other as brother and sisters; ensured being level-headed in understanding and act balanced. She has

always been supportive of our individualities, taught us to be patient, non-judgmental and unassuming.

I can say that a part of my character has been shaped by my mother's upbringing. Though we used to simply imitate or follow our parents, my respect for women and gender sensibilities began from there.

I understand that I am acknowledging the inspiration from my mother in my life. I consider myself gender sensitive and balanced. I question whether it is just enough to acknowledge or how can one bring changes that can alter power relations in family, that can give equal status for women in a family? As such an effort could ease the unnecessary burdens taken by the wife/mother/sister in the families, whether are we ready to do it is the question that all of us must pose for each other.

## ದಾಹ

– ಮಾನಸ

ಬಿಸಿಲ ಬೇಗೆಗೆ ಬೆಂದು ಬೆಂಡಾಗಿದೆ ಧರೆ

ದಣಿವಿನ ತಾಪಕ್ಕೆ ಪ್ರಾಣಿಗಳಿಗೂ ಸಿಗುತ್ತಿಲ್ಲ ನೆರಳ ಆಸರೆ

ದಿನದಿಂದ ದಿನಕ್ಕೆ ಜ್ವಾಲಾಮುಖಿಯ ಕೆಂಡವಾಗುತ್ತಿದೆ ಭೂಮಿ

ಭವಿಷ್ಯದ ದುರಾಸೆಯಿಂದ ಮರೆಯಾದ ಪ್ರಕೃತಿ

ಇವರೊಳಗಿನ ಪರಸ್ಪರ ಕಿತ್ತಾಟದಲ್ಲಿ ಅಂತಿಮ ವಿಜಯಿ ಯಾರು?

ನಾಮೇಲು ನಾಮೇಲು ಅನ್ನೋ ಸ್ವಾರ್ಥಸ್ಪರ್ಧಿಗಳಿಂದ ಆಗಿದೆ ನಿನ್ನ ವಿನಾಶ

ಆದರಿಂದು ನಿನ್ನಲ್ಲಿಯೇ ನಡೆಯುತ್ತಿದೆ ಸಹಜತೆಯ ಹುಡುಕಾಟ

ಎಲ್ಲಾ ಕಳೆದುಕೊಂಡವನಿಗೀಗ ಬಂದಿದೆ ಬೆಳಕಿನರಮನೆಯ ದಾಹ

ಈ ಮೋಹ ಮೊದಲೇ ಇದ್ದಿದ್ದರೆ ಆಗುತ್ತಿರಲಿಲ್ಲ ಈ ರೀತಿ ಪ್ರಕೃತಿಯ ಪ್ರವಾಹ,,,,,

# ನನ್ ಅಜ್ಜಿ..

–ಭರತ್ ಚವ್ಹಾಣ್

ನನಗ ಜಗತ್ತನ್ನ ತೋರಿಸಿದ್ದೇ ನೀನು. ಇವತ್ ಸಂಬಂಧಿಕರು ಮತ್ತ್ ಊರಿನೋರು ನನಗ ಗುರುತಿಸೋದೆ ಅಂಬವ್ವನ ಮೊಮ್ಮೊಗ ಅಂತ. ನಿನ್ನಾ ಎಲ್ಲಾರು 'ಭಾರತಜ್ಜಿ' ಅಂತ ಕರೀತಿದ್ದಾಗ ನನಗ ಖುಷಿ ಆಕಿತ್ತು. ಯಾಕಂದ್ರ ನನ್ ಹೆಸರು ನಿನ್ ಹೆಸರಿನಾಗ ಸೇರ್ಕೊಂಡಿತ್ತು. ಆದ್ರ ಅದು ನಿನ್ನಿಂದಾನಾ ಬಂದೇತಿ ಅಂತ ನಾ ಮರೆತಿದ್ದೆ. ನಮ್ ಏರ್‍ಯಾದಾಗ ನಿನಿಗ ಎಲ್ಲಾರ್‍ದು ಪರಿಚಯಾ ಇದ್ದಿದ್ರಿಂದ ಇಲ್ಲಿ ಬಾಳ್ ಪ್ರಸಿದ್ಧಿ ನೀನು. ಮತ್ತ್ ನಿನಿಗ ಅಂದಾಜು ನೂರ್ ವರ್ಷ ಅಂದ್ರ ಯಾರೂ ನಂಬತ್ತಿರಲಿಲ್ಲಾ. ಪಕ್ಕದ ಓಣ್ಯಾಗಿರೋ ನಿಮ್ ಅಣ್ಣನ ಮಗಳ ಮನೀಗ ಹೋಗಾಕ ನಾವು ಬ್ಯಾಡಂತಿರಲಿಲ್ಲಾ. ನೀ ಹೋಗುವಾಗ ಕಲ್ಲು ಎಡವಿ ಬೀಳ್ತೀ ಅನ್ನೋ ಹೆದ್ರೀಕಿಗೆ ಹೋಗಾಕ ಬಿಡ್ತಿರಲ್ಲಿಲ್ಲ. ಆದ್ರೂ ಯಾರ್ ಎಷ್ಟ್ ಹೇಳೀದ್ರೂ ಕೇಳ್ತಿರ್ಲಿಲ್ಲಾ, ಹೋಗೇ ಬರ್ತಿದ್ದೀ. ಆ ಓಣ್ಯಾಗ ಎಲ್ಲಾರು ಹೇಳ್ತಿದ್ರು "ನಿಮ್ಮಜ್ಜ ಸತ್ ಮ್ಯಾಲಾ ನಿಮ್ಮಪ್ಪನ್ನ ನೋಡ್ಕೊಳ್ಳಾಕ ನಿಮ್ಮಜ್ಜಿ ಬಾಳ್ ಕಷ್ಟಾ ಪಟ್ಟಾಳಂತ". ನನಗ ನೆನಪಿರುವಂಗ ಅಗಿ(ಮೆಣಸಿನಕಾಯಿ, ಟಮೊಟೋ, ಬದನೆಕಾಯಿ ಇತ್ಯಾದಿ ಚಿಕ್ಕ ಚಿಕ್ಕ ಸಸಿಗಳು)ಮಾಡಿ ಮಾರತಿದ್ದಿ. ಅವಾಗ ಏನ್ಬೇಕಂದಿದ್ದ ಕೊಡಸ್ತಿದ್ದಿ; ಯವಾಗ ನೀ ರೊಕ್ಕ ಕಳ್ಕೊಂಡಿ ಅವಾಗಿಂದ ನೀ ಆ ಕೆಲಸ ಮಾಡೋದ ಬಿಟ್ಟಿ.

ಎಷ್ಟೋ ಮಾತನ್ನ ಹೇಳ್ಬೇಕ ಅಂನ್ಕೋಂಡಿದ್ದೆ ಆಗ್ಲಿಲ್ಲ. ಈಗ ಹೇಳ್ಬೇಕಂದ್ರ ನೀನ ಇಲ್ಲ. ಆದ್ರ ನೀ ಇಲ್ಲಂತ್ ಅನ್ನಾತ್ತಿಲ್ಲ ಆದ್ರ ನಾ ಕಲ್ಪನಾ ಜಗತ್ತಿಂದ ಹೊರಗ ಬಂದಾಗ ನೀ ಇಲ್ಲನ್ನೋ ಕೊರಗು ಕಾಡ್ತೇತಿ. ಎಲ್ಲಾರು ಹಳೋಂಗ ನೀ ಮತ್ತೊಬ್ಬರಿಗೆ ಕೆಟ್ ಬಯಸೋಳಲ್ಲ; ಕಪಟ ಮನಸಿನೋಳಲ್ಲ. ನಾ ಮನೀಗೆ ಬಂದ್ ಕೂಡ್ಲೆ ಮೊದಲ ನಿಂದ ಧ್ವನಿ ಕೇಳತಿತ್ತ "ಭಾರ್‍ತು ಈಗ ಬಂದ್ಯಾಪ ಊಟಾ ಮಾಡ" ಯಾವಾಗಿದ್ರೂ ಇದ ನಿನ್ನ ಮೊದಲನೇ ಮಾತ. ಆದ್ರ ಈ ಸಾರಿ ಮನಿಗೆ ಬಂದಾಗ ಆ ಧ್ವನಿ ಕೇಳಲ್ಲಿಲಾ; ನೀನೂ ಕಾಣ್ಲಿಲಾ. ನೀ ಧವಾಖಾನಿಯಾಗ ಮಕ್ಕೊಂಡಿದ್ದಿ. ನಾ ಬಂದ ಮಾತಾಡ್ಸೀದ್ರೂ ಮಾತಾಡ್ಲಿಲ್ಲ. ಯಾಕ ಅಷ್ಟ ಸಿಟ್ ಮಾಡ್ಕೊಂಡಿದ್ದೇನ. ಮಾತಾಡಬ್ಯಾಡ ಅಂದ್ರೂ ಒಂದೇ ಸಮ ಮಾತಾಡ್ತಿದ್ದಿ; ಈ ಸಾರಿ ಹಂಗ್ಯಾಕ್ ಮಾಡ್ದೀ? ಯಾಕ್ ಮಾತಾಡ್ಲಿಲ್ಲಾ?. ನಿನ್ನ ನಾ ಬಾಳ ಹಚ್ಕೋಂಡಿದ್ದೆ ಅದ್ಕ ನೀ ಅಂದ್ರ ಬಾಳ ಪ್ರೀತಿ. ಸಣ್ಣಾವ ಇದ್ದಾಗ ಹಣ್ಣು ಕೊಡಿಸಂತ ಕಾಡಿದ್ದು, ಆಟಾ ಆಡಾಕ ಹೋದಾಗೆಲ್ಲ ಜಗಳಮಾಡಿ ನಿನ್ನ ಕರ್ಕೊಂಡು ಹೋಕಿದ್ದೆ. ನೀನು ನನ್ ಸಲವಾಗಿ ಎಷ್ಟೋ ಮಂದಿ ಜೋಡಿ ಜಗಳ ಮಾಡಿ. ಅಪ್ಪ ಹೊಡಿಯಾಕ ಬಂದಾಗೆಲ್ಲ ನೀನಾ ಬಚಾವ್ ಮಾಡ್ತಿದ್ದಿ. ಬಾಳ್ ಸಾರಿ ಹಿಂಗ ಕಾಪಾಡಿದಿ. ಅವತ್ತೊಂದಿನ ಮಳೀ ಬರುವಾಗ ನಿನ ಸೆರಗನ್ನ ನನ್ ತಲೀಮ್ಯಾಲ ಹೊಚ್ಚಿ, ಕೈಹಿಡ್ಕೊಂಡು ಮನೀಗ ಕರ್ಕೊಂಡು ಹೋಗಿದ್ದಾ ನಾ ಇನ್ನೂ ಮರ್ತಿಲ್ಲ. ಒಮ್ಮೆ ಗದ್ದಲದಾಗ ತುಂಬಿದ ಬಸನ್ಯಾಗ ನೀ ಅದೀ ಅಂತ ನಾ ಹತ್ತಿದ್ದೆ; ಆದ್ರ ನೀ ಬಸನ್ಯಾಗ ಇರ್ಲಿಲ್ಲ. ಆಗ ನೀ ಹೋಗೋ ಬಸ್ನಾ "ಓ ಕಂಡಕ್ಟ್ರಾ ಗಾಡಿ ನಿಲ್ಸೋ ಮಾರಾಯ" ಅಂತ ಕೂಗಿ ಬಸ್ ನಿಲ್ಸಿ ಇಳಿಸ್ಕೊಂಡಿದ್ದಿ. ನಾ ಬಿಜಾಪುರದಾಗ ಇದ್ದಾಗ ನೀನಗ ಫೋನ್ ಮಾಡಿ ಏನ್ ತರ್‍ಲಂತ ಕೇಳಿದ್ರ, "ಏನು ಬ್ಯಾಡ ಲಗೂನಾ ಮನೀಗ್ ಬಾ" ಅಂದಿದ್ದಿ. ನಾನಾಗೇ ಸೀರೀ ಬೇಕೇನ ಅಂತ ಕೇಳ್ದಾಗ "ಹ್ಞೂ" ಅಂದಿದ್ದಿ. ನಾ ಒಂದ್ಕಡೆ ಕೆಲಸಕ್ಕ ಸೇರಿದಾಗ ಅಲ್ಲಿ ಹದಿನಾಲ್ಕು ಸಾವಿರ ಪಗಾರ ಬರ್ತೇತಿ ಅಂತ ಹೇಳೀದ್ರ "ಲಗೂನಾ ಇಪ್ಪತ್ ಸಾವಿರ ತಗಳೋಂಗ ಆಗ್ಲಿ" ಅಂತ ಹೇಳಿದ್ದಿ. ಈಗ ನಿನ್ನ ಆಶೀರ್ವಾದದಂಗ ಅದಕ್ಕಿನ ಜಾಸ್ತಿನಾ ಪಗಾರ ತಗಳೋಕತ್ತೀನಿ.

ನೀ ಎಲ್ಲಾರ ಮುಂದ ಹೇಳತಿದ್ದಿ ಮೊಮ್ಮಕಳ ದೊಡ್ಡವರಾದ್ದರು ಅವರ ಮದವಿ ಮಾಡಿ ಸಾಯತೇನಿ ಅಂತ. ಯಾವಾಗರ ಒಂದ್ಸಲ ಸಿಟ್ಟ ಬಂದಾಗ 'ನೀ ಸತ್ತಾಗ ನಾ ಬರಲ್ಲಾ' ಅಂತ ನಾ ಹೇಳಿದ್ದೆ. ಆದರ ಯಾವಾಗ ನಿನಗ ಅರಾಮ ಇಲ್ಲದ ಮಲಕೊಂಡ್ಡಿದ ಸುದ್ದಿ ಕೇಳಿ ತಡಕೊಳ್ಳಾಕ ಆಗಲ್ಲಿಲಾ ನಿಂತ ಕಾಲ ಮೇಲೆ ಮನಿಗೆ ಬಂದೆ ಅವಾಗ ನೀ ಕಣ್ಣು ತೆಗಿಲ್ಲಿಲಾ, ಮಾತಾಡ್ಲಿನ್ನು ಇಲ್ಲಾ. ನಾಲ್ಕ–ಐದ ದಿನಾ ನಿನಗ ಸ್ವಲ್ಪ ಅರಾಮ ಅಕ್ಕೆತ್ತಿ ಅಂತ ಮನ್ಯಾಗ ಇದ್ದೆ ಏಲ್ಲಾರು ಎಷ್ಟ ದಿನಾಂತ ಹಿಂಗ ಕುಡತ್ತಿ ಕೆಲಸಕ್ಕ ಹೊಗಂತ

ಗುಲ್ಬರ್ಗಾಕ್ಕೆ ಕಳ್ಸಿದ್ರ ಅವತ್ತ ಮನಸ್ಸಿಲ್ಲದ ಮನಸ್ಸಲೇ ನಾ ರವಿವಾರ ರಾತ್ರಿ ಹುಬ್ಬಳ್ಳಿಯಿಂದ ಬಿಟ್ಟ, ಸೋಮವಾರ ಬೆಳ್ಳಿಗೆ ಗುಲ್ಬರ್ಗಾಕ್ಕೆ ಬಂದೆ. ಅವತ್ತೋಂದಿನಾ ಕೆಲಸಾ ಮಾಡಿ ಮನಿಗೆ ಹೋಗಿ ಮಲ್ಕೊಂಡಿದ್ದೆ ಸಮಾದಾನ ಆಗತ್ತಿರ್ಲಿಲಾ. ಆಕಡೆ ಈಕಡೆ ಹೊಳಾಡ್ಕೊಂಡ ಇದ್ದೆ, ರಾತ್ರಿ ಕಳದ್ರ ಸಾಕ್ಕಂತ. ನಿದ್ದಿ ಬರಲ್ಲಿಲಾ ರಾತ್ರಿ 12.45 ಟೈಮಿಗೆ ಮೋಬೈಲ ರಿಂಗ್ ಆತ್ ಅಷ್ಟೊತ್ನಾಗ ಯಾರ ಅಂತ ನೋಡಿದ್ದರ ರಾಜುಮಾವ ಫೋನ ಮಾಡಿದ್ದಾ ಇವಾ ಯಾಕ ಈಗ ಫೋನ ಮಾಡಿದ್ದಾ ಅಂತ ಪೋನೆತ್ತಿ ಮಾತ್ತಾಡಿದೆ ಅವಾಗ ಗೊತ್ತತ್ತ ನೀ ನಮ್ಮನ್ ಬಿಟ್ಟ ಹೋದಿ ಅಂತ. ಕಡೆಗೂ ಕೊನೆ ಸಾರಿ ನೋಡಾಕ ಆಗಲ್ಲಿಲಾ, ಇದ ಯಾವಾಗಿದ್ರೂ ಕಾಡತ್ತೆತಿ. ಬಾಳ ಜನಾ ಬಂದ್ದಿದ್ರು, ಊರಿನೋರ ಎಲ್ಲಾರು ಬಂದ್ದಿದ್ರು, ಅಂತ ಹೇಳಿದ್ರು ಆದ್ರ ನಾನ ಇಲ್ಲಾ. ನೀ ನಮ್ಮಗ ಆಸರೆಯಾಗಿದ್ದಿ ಈಗ ನಾವ ಅನಾಥರಾದ್ವಿ ಅಂತ ಅನಸಾತ್ತೆತ್ತಿ. ನಾ ಅಂಬವ್ವನ್ನ ಮೊಮ್ಮಗ ಅಂತ ಹೆಳಕೋಳ್ಳಾಕ ನನಗ ಹೆಮ್ಮೆ ಐತ್ತಿ. ನೀ ಮತ್ತ ನಮ್ಮ ಮನ್ಯಾಗ ಹುಟ್ಟಿ ಬಾ. ಇನ್ನೂ ಹೆಳಾಕ ಬಾಳ ಐತ್ತಿ ಆದರ ಹೆಳಾಕ ಟೈಮು ಸಾಲ್ಲಲಾ ಬರಿಯ್ಯಾಕ ಶಬ್ದ ಸಿಗಾತ್ತಿಲ್ಲಾ.

## ನನ್ನವಳು

–ಗಂಗಾಧರ ಸ್ವಾಮಿ ಎಸ್

ಚಂದಿರನೇ ನಾಚಿದ
ನನ್ನವಳ ಅಂದಕೆ
ಹಂಸವೇ ನಾಚಿತು
ನನ್ನವಳ ನಡಿಗೆಗೆ

ಮೂಕವಾಯಿತು ಕೋಗಿಲೆ
ನನ್ನವಳ ಕಂಠಕೆ
ಶರಣಾದಳು ಶಾರದೆ
ನನ್ನವಳ ಹಾಡಿಗೆ

ಸೋತೆನೀ ಮನವನು
ನನ್ನವಳ ಸ್ನೇಹಕೆ
ಮರೆತೆನೀ ಜಗವನು
ನನ್ನವಳ ಪ್ರೀತಿಗೆ

## ಬಾಹು ಪಾಶದ ಬೇನೆ

ಶಿವಕುಮಾರ ಸಿ ಎಸ್

ನರಿ ತೋಳ ಹಳ್ಳ ಕೊಳ್ಳ

ಹಂದಿ ನಾಯಿಗಳ ಮುಂದೆ

ಬಿದ್ದ ಹಸಿಮಾಂಸದ ಮುದ್ದೆ

ಜೀವಕಳೆದ ಭಾವ ಶೂನ್ಯ

ಪುರುಷ ಭಿತ್ತಿಯೊಳು

ದೇಹ ಮಾನ್ಯ !

ಏರು ಜವ್ವನದ ಉಮೇದಿಗೆ

ಬೇಲಿ ಹಾರುವ ಚಾಳಿಗೆ, ತೀಟೆಗೆ

ಸಿಕ್ಕ ತಂಗಾಳಿ ನಾನು

ಇರುಳ ಬೆನ್ನಿಗೆ ತಾಕುವ

ನಿತ್ಯ ಮೈತ್ರಿ !

ಹಸಿ ಹಾಸಿಗೆಯ ಮೇಲೆ

ಸ್ವಂತ ಕನಸುಗಳಿಲ್ಲ

ತೋರಿ ನಗುವ ಬೆರಳಿಗೆ

ದಿಟ್ಟ ಉತ್ತರವಿಲ್ಲ

ಮತ್ತಿಗೆ ಮದ್ದಾಗುವ  ಸ್ವತ್ತು ಮಾತ್ರ

ಪೌರುಷದ ಖಾತ್ರಿಗೆ ದೃಢೀಕರಣ ಪತ್ರ !

ಕೊಟ್ಟ ಕೊರಳಿಗೆ ನೇಣು ಬಿಗಿದವ



ಬೇಲಿಯೊಂದನು ನೆಟ್ಟು

ನಡುವಲೇ ನುಣುಚಿಕೊಂಡ ಮೇಲೆ

ಇದೀಗ ಬಂದಿವೆ

ಪೋಲಿ ದನಗಳ ಹಿಂಡು !

ತಮದ ತಾಪದ ಉರಿಯ ಮೋಹಕೆ

ಬಿಗಿದ ಬಾಹುಗಳ ಸ್ವರ್ಗ ದಾಹಕೆ

ಅನುದಿನವು ನಡೆದಿಹುದು

ಅಟ್ಟಹಾಸ;

ಅಡಿ ಮುಡಿಯೆ ಸೆರೆಯಾಗಿ

ಹೇಸಿಗೆಯೆ ಹಿತವಾಗಿ

ಗೇಣುದ್ದ ಒಡಲಿಗೆ

ಅನಿವಾರ್ಯ ಸಹವಾಸ !

ಮೈಥುನಕೆ ಎಣೆ ಇಲ್ಲ

ಬದುಕಿನೆಣೆಗೆ ತಲೆಬಾಗಿ

ಅಂಗಾತ ಬಿದ್ದುಕೊಂಡಿದ್ದೇನೆ

ಯಾರನ್ನೇ ಹೊದ್ದರೂ

ಯಾರೇನೇ ಅಂದರೂ

ಉಸಿರೆಳೆಯುತ್ತೇನೆ ಹೀಗೆ;

ಸತ್ತ ಮನಸಿನೊಂದಿಗೆ

ಕಾಲನ ತುಡಿತದ ಅಡಿಗಡಿಗೆ !!

## ಚಿದಂಬರ ರಹಸ್ಯ !!

–ರಾಘವೇಂದ್ರ ಹೇರ್ಳೆ ಜಿ.

ಅದು ಅಪ್ಪಟ ಮೀನ ಹೆಜ್ಜೆಯ ಜಾಡು

ಮರ್ಮಭೇದವನರಿತವರು ಎಲ್ಲಿದ್ದಾರೆ, ಯಾರಿದ್ದಾರೆ ಈ ಭೂಮಂಡಲದೊಳಗೆ

ಹಿಡಿದಷ್ಟೂ ಜಾರುವ, ಮೊಗೆದಷ್ಟೂ ಉಳಿಯುವ ಶೇಷಾಂಶ
ಕೊಡವಿದಷ್ಟೂ ಅಂಟುವ ಬಿಟ್ಟರೂ ಬಿಡದ ಮಾಯೆ
ಭಾವನೆಗಳ ಕಲಸುಮೇಲೋಗರದಲ್ಲಿ ಎಲ್ಲವೂ ಅಯೋಮಯ
ಅರ್ಥವೇ ಆಗದ ಒಗಟು ; ಬ್ರಹ್ಮಗಂಟು; ನಂಟಿನ ಕೊನೆಯರಿಯದ ಪ್ರಶ್ನಾವಳಿಯ ಸಂಪುಟ
ಎತ್ತಣಿಂದೆತ್ತ ಲೆಕ್ಕ ಹಾಕಿದರೂ ಬಿಡಿಸಲಾಗದ ಚದುರಂಗ
ಕೈಗೆ ಸಿಕ್ಕಿಯೇ ಬಿಟ್ಟಿತೆನ್ನುವಾಗ ನಾಗಾಲೋಟದತ್ತ ಅಮೃತಪಾನಕ್ಕಾಗಿ ಗರುಡಗಮನ!

ಒಂದೊಮ್ಮೆ ಮಾನಸಸರೋವರದಂತೆ ನಿರಾಳ, ನಿರ್ಮಲ
ಮಗದೊಮ್ಮೆ ಧುಮ್ಮಿಕ್ಕುವ ರಕ್ಕಸದಲೆಗಳ ತ್ಸುನಾಮಿ
ಅಗೋ ಇದೀಗ ಶಾಂತರಸವೇ ಮೈತಳೆದಷ್ಟು ಬುದ್ಧಕಳೆ
ಮತ್ತೆ ಅಬ್ಬರಿಸಿ ಬೊಬ್ಬಿರಿಯಿತಲ್ಲ ರೌದ್ರನರ್ತನದ ಭದ್ರಕಾಳಿಯ ಅವತಾರ
ಆಗೊಮ್ಮೆ ಅಧೋಮುಖಿಯಾಗುವ ಗುಪ್ತಗಾಮಿನಿ
ಎಂದಾದರೂ ಒಮ್ಮೆ ಎಲ್ಲವನ್ನೂ ಕಕ್ಕಿಬಿಟ್ಟು ಅಗುಳೊಂದ ಒಡಲಲ್ಲೇ ಉಳಿಸಿಕೊಳ್ಳುವ ಬಂಗಾರದ ಜಿಂಕೆ
ಯಾವ ಹೆಸರಿಂದ ಕರೆದರೂ ಅಷ್ಟೆ; ಬರೆದರೂ ಅಷ್ಟೆ,
ಉಳಿಯುವುದು ಚಿತ್ತುಮಾಡಿದ ಅರ್ಧ ಪುಟ ಮಾತ್ರ, ಇನ್ನರ್ಧ ಖಾಲಿ ಖಾಲಿ.

ಸಿಡುಕುತ್ತಲೇ ಕಟ್ಟೆಯೊಡೆಯುವ ಅಳು,
ನಗುತ್ತಲೇ ದ್ವೇಷದ ಕಿಡಿ ಹತ್ತಿಸುವ ಹತ್ತಿಕ್ಕಲಾಗದ ಗೀಳು,
ಸಂತೆಯ ನಡುವೆಯೇ ಏಕಾಂತ ಸುಖದ ನಿರೀಕ್ಷೆ
ಸ್ಮಶಾನಮೌನದ ನಡುವೆಯೇ ತಾರಕಧ್ವನಿಯ ಸಮಾರಾಧನೆ
ಎಲ್ಲವೂ ಗೊತ್ತಿದ್ದೂ ಏನೂ ಗೊತ್ತಿಲ್ಲದಂತಹ ಅಮಾಯಕತೆ
ಸರ್ವಜ್ಞತೆಯ ಕವಚವಿದ್ದರೂ ಅಬಲೆಯೆನಿಸಬೇಕಾದ ಬದುಕಿನ ವ್ಯಂಗ್ಯ
ಕಾಮ, ಪ್ರೇಮ, ಪ್ರಣಯಗಳ ಮೀರಿದ ಅವ್ಯಕ್ತಭಾವದಲಿ ನೇಯ್ದ ಹೊಸತೊಂದು ಬಲೆ
ಕಲ್ಲೊಳಗೆ ಹೂವು; ಹೂವೊಳಗೆ ಹಾವು; ಹಾವೊಳಗೆ ಆವು!

Azim Premji Foundation

ಒಂದಿನಿತೂ ಗುಟ್ಟು ಬಿಡದ ಕಣ್ಣಾಮುಚ್ಚಾಲೆ.

ತ್ಯಾಗ–ಭೋಗಗಳ ದ್ವಂದ್ವ
ನೈರಾಶ್ಯ–ಲೋಲುಪತೆಗಳ ವೈರುಧ್ಯ
ಸಾಮ್ಯ–ವೈಷಮ್ಯಗಳ ವೈಚಿತ್ರ್ಯ
ಅಣು–ರೇಣು–ತ್ರಣ–ಕಾಷ್ಠಗಳಲ್ಲೂ ಪುಟಿಯುವ ಚಾಂಚಲ್ಯ
ಪೂರ್ಣತೆಯ ಪಾರ್ಶ್ವದಲ್ಲೇ ಮೊಳೆಯುವ ಅಪೂರ್ಣತೆಯ ವೈಕಲ್ಯ
ಇಬ್ಬನಿಯು ಕರಗುವುದರೊಳಗೆ ಕುದಿಯುವ  ಲಾವಾರಸ
ಹುಚ್ಚು ಕುದುರೆಯ ಕೆನೆತದ ಒಡಲೊಳಗೆ ನಸುಗಂದನ ಗೆಜ್ಜೆಸಪ್ಪಳ
ಏಳು ಮಲ್ಲಿಗೆಯ ತೂಕದ ರಮ್ಯತೆಯ ಬೆನ್ನಿಗೆ
ಭೂಮಿತೂಕದ ವಿಶ್ವಪ್ರಜ್ಞೆಯ ಬೋಧಿವೃಕ್ಷ !
ಯಾರಿಗೂ ದಕ್ಕದ ಚಿದಂಬರ ರಹಸ್ಯ !!!!

ಅಲ್ಲಿ ತಳಮಳದ ಬೇಗುದಿಯಿದೆ; ಸೆಟೆದು ನಿಂತ ಧೀಮಂತಿಕೆಯೂ ಇದೆ,
ಕ್ರೌರ್ಯಕೆ ಶರಣಾದ ಆಕ್ರಂದನವಿದೆ; ವಂಚನಗೆ ಪಾಠ ಕಲಿಸಿದ ಶೌರ್ಯವೂ ಇದೆ,
ಮಸಲತ್ತಿಗೆ ಬಲಿಯಾದ ನಿರ್ಭಾಗ್ಯವಿದೆ, ಜೀವನ ಸೌರಭವ ಹೊತ್ತು ತಂದ ಸೌಭಾಗ್ಯವಿದೆ,
ಗಾಣದೆತ್ತಿನ ಚಾಕರಿಯಿದೆ; ಸ್ವಾವಲಂಬಿ ಬದುಕಿನ ಭರವಸೆಯಿದೆ,
ಕಾಮಾಟಿಪುರದ ಕರಿನೆರಳಿದೆ; ಸ್ವಸ್ಥಸಮಾಜದ ಮುಖವಾಣಿಯಿದೆ,
ಕನಸುಗಳನ್ನು ಕೊಂದಕಥೆಯಿದೆ; ಸಬಲೀಕರಣದ ನನಸಿನ ಸ್ವಾಗತಗೀತೆಯಿದೆ,
ಅಸ್ಪೃಶ್ಯಲೋಕದ ಕರಾಳ ಛಾಯೆಯಿದೆ; ಜಗದ ಜೋಗುಳದ ಪೂಜ್ಯ ಮನಸಿದೆ.

ವಿಭಿನ್ನ, ವಿಶಿಷ್ಟ, ವಿಕ್ಷಿಪ್ತ, ವಿಶೇಷ ಲೋಕದ ಕದ ಈಗಷ್ಟೇ ಅರೆತೆರೆದಿದೆ
ಕಂಡದ್ದು, ಇಳಿಸಿಕೊಡದ್ದು, ಅರಗಿಸಿಕೊಂಡದ್ದು ಇನ್ನೂ ಎಷ್ಟೋ ಇದೆ!!
ಇನ್ನು ಕಾಣದ್ದು, ಇಳಿಸಲಾಗದ್ದು, ಜೀರ್ಣವಾಗದ್ದು ಅದೆಷ್ಟೋ ?
ಲೆಕ್ಕವಿಟ್ಟ ಕರಣಿಕರೇ ನಾಪತ್ತೆ !
ಇದು ಎಂಥಾ ಲೋಕವಯ್ಯಾ? ನೀವೂ ಹೇಳಬಲ್ಲಿರಿ, ಖಂಡಿತ
ಆದರೆ ಇದು ಹೀಗೆಯೇ ಎಂದು ನಿರ್ಣಯಿಸಬಲ್ಲಿರಾ?
ನೀ ಮಾಯೆಯೊಳಗೋ ? ನಿನ್ನೊಳು ಮಾಯೆಯೋ ?
ಕಟ್ಟಕಡೆಯ ಶೇಷಪ್ರಶ್ನೆಯ ಸಿಕ್ಕು ಬಿಡಿಸಬಲ್ಲಿರಾ ?
ನಾನಂತೂ ನಿರುತ್ತರ ...!
ನನ್ನಷ್ಟೇ ನೀವೂ  ...!!

# ಅದೇ ಬೆಳೆ ಈ ಹೊಲದಲಿ.

-

ಗಂಗಾಧರ ಸ್ವಾಮಿ ಎಸ್

ಜನ ಸೇವೆಯೇ ಜನಾರ್ದನ ಸೇವೆಯೆಂಬ

ಮಂತ್ರವ ಜಪಿಸುತಾ ಜನರ ಮನೆ

ಬಾಗಿಲಿಗೆ ಬಂದು ಮುಗ್ಧ ಜನರಿಗೆ

ಬಣ್ಣದ ಮಾತುಗಳಿಂದ

ಪೊಳ್ಳು ಭರವಸೆಗಳಿಂದ

ಬದುಕಿನಲಿ ಆಸೆಯ ಬಿತ್ತುತ ಬಂದು

ಅವರಿಂದ ಅಧಿಕಾರಕೆ ಬಂದಾನಂತರ

ಜನಸೇವೆಯ ಮರೆತು

ಸ್ವಜನ ಸೇವೆಯ ಕಡೆಗೆ ತಿರುಗಿ

ಅಧಿಕಾರದ ಮದದಲಿ

ಮಂತ್ರಿಗಿರಿಯ ಸೋಗಿನಲಿ

ಮಾನ ಮರ್ಯಾದೆಯನ್ನೆಲ್ಲವನು ಬಿಟ್ಟು

ಮೋಜು ಮಜಾ ಮಸ್ತಿಯಲ್ಲಿ ಕಳೆದರು

ತಾವಾಡಿದ್ದೇ ಆಟ ಎನ್ನ ತೊಡಗಿದರು

ಸಾವಿರಾರು ಕೋಟಿ ಸಂಪತ್ತನ್ನು

ನಿಸರ್ಗ ಮಾತೆಯ  ಒಡಲೊಳಗಿಂದು

ಮಾಡತೊಡಗಿದರು ಲೂಟಿ

ಬಹಿರಂಗವಾಗಿಯೇ ಲೂಟಿ ಹೊಡೆದ ಖದೀಮರು

ಅದೆಲ್ಲವೂ ತನ್ನದೇ ಎಂದೆನುತ

ತಿರುಗುವ ಬಲು ಘಾಟಿಗರು

ಅಭಿವೃದ್ಧಿಯ ಹೆಸರಲಿ ಜನರ ಭೂಮಿಯನು

ಬಲವಂತದಿಂದ ಕಸಿದುಕೊಳ್ಳುತ

ನಾಡಿನ ಏಳಿಗೆ ಗೈಯದೆ

ತಾನು ತನ್ನ ಕುಟುಂಬ ಎನುತ

ಸ್ವ ಏಳಿಗೆಯಲ್ಲಿ ಮುಳುಗಿ

ಬೇರೆಯವರ ಏಳಿಗೆ ಸಹಿಸದಿವರ

ಮನಸಿನಲಿಯೇ ಇಕ್ಕಟ್ಟು

ಪಕ್ಷದೊಳಗೆ ಬಿಕ್ಕಟ್ಟು

ಆದರೂ ಜನತೆಯ ಎದುರು ನುಡಿಯುವರು

ನಾವೆಲ್ಲರೂ ಒಗ್ಗಟ್ಟು

ಬದಲಾವಣೆ ಬಯಸಿ

ಇವರ ಬಿಟ್ಟವರ ತಂದರೂ

ಅವರ ಬಿಟ್ಟು ಇವರ ತಂದರೂ

ಭ್ರಷ್ಟತೆಯ ಅನಿಶ್ಚಿತತೆಯ

ಬರಗಾಲದ ನೆರೆ ಪ್ರವಾಹದ

ಬವಣೆ ಮಾತ್ರ ಮುಗ್ಧ ಜನತೆಗೆ

ಕರುಣೆಯಿಲ್ಲ ಈ ನಾಯಕರಲಿ

ಯಾರೇ ಬರಲಿ ಯಾರೇ ಹೋಗಲಿ



ಅದೇ ಬೆಳೆ ಈ ಹೊಲದಲಿ

ಅದೇ ಬೆಳೆ ಈ ಹೊಲದಲಿ!!

ಬಾಲ್ಯ —ವಿನೋದ್ ಪಾಖರೆ

ನೀನು ನಾನಾಗಿಸುವ ಹಠದಲ್ಲಿ

ನಿನ್ನನ್ನು ನನ್ನಂತಿರಲು ಬಿಡಲಿಲ್ಲ

ನೀನು ನೀನಾಗು ಎನ್ನುವಷ್ಟರಲ್ಲಿ

ನೀನು ನೀನಾಗಿರಲಿಲ್ಲ

ಬಾಲ್ಯ, ಇದು ದೇವರು ಪ್ರತಿಯೊಬ್ಬರಿಗೂ ಕೊಟ್ಟ ಒಂದು ವರ. ಅದನ್ನು ಎಲ್ಲರೂ ಅನುಭವಿಸಿಯೇ ಸಾಗುವರು. ಅದು ಒಂದು ಹಂತದಲ್ಲಿ ಮಾತ್ರ ಇರುವುದು. ಇರುವಾಗ ನಮಗೆ ಅದು ಅರಿಯದು. ಬಾಲ್ಯದಲ್ಲಿದ್ದಾಗ ದೊಡ್ಡವರಾಗುವ ಆಸೆ. ದೊಡ್ಡವರಾದ ಮೇಲೆ ಬಾಲ್ಯ ಬೇಕೆನ್ನುವ ಆಸೆ. ಮಕ್ಕಳು ಮಕ್ಕಳಾಗಿದ್ದಾಗ ಮಾತ್ರ ಚೆನ್ನ. ಆದರೆ ಅದನ್ನು ಅರಿಯದ ನಾವು (ಪಾಲಕರು) ಮಕ್ಕಳನ್ನು ಶಿಸ್ತು, ವ್ಯವಸ್ಥಿತತೆಯ ನಿಟ್ಟಿನಲ್ಲಿ ಮಾಡುವ ಹಠದಲ್ಲಿ ಆತನ ಬಾಲ್ಯತನದ ಹಕ್ಕನ್ನು ಅವನಿಂದ/ಅವಳಿಂದ ದೂರಮಾಡುತ್ತೇವೆ. ಎಷ್ಟರ ಮಟ್ಟಿಗೆ ಅದು ಸರಿ? ಪ್ರತಿಯೊಂದು ಮಗುವಿನ ಶಾರೀರಿಕ, ಮಾನಸಿಕ, ಭಾವನಾತ್ಮಕ ವಿಕಾಸವಾಗಬೇಕೆಂದರೆ ಬಾಲ್ಯ ಜೀವನ ಮಹತ್ವದ ಪಾತ್ರ ವಹಿಸಿದೆ.

ಪಾಲಕರಾದ ನಾವು ಮಗು ಬಾಲ್ಯಾವಸ್ಥೆಯಲ್ಲಿದ್ದಾಗ ಆತನನ್ನು/ಆತಳನ್ನು ಹಾಸ್ಟೆಲ್ ಅಥವಾ ಇತರ ಒಂದು ಬೇರೆ ಸ್ಥಳದಲ್ಲಿ ದೂರವಿಟ್ಟು ಓದಿಸುವ ಪ್ರಕ್ರಿಯೆ ಎಷ್ಟರ ಮಟ್ಟಿಗೆ ಸರಿ? ಬಾಲ್ಯದಲ್ಲಿ ಮಗು ತಂದೆತಾಯಿಯ ಅರೈಕೆ, ಪಾಲನೆ–ಪೋಷಣೆಯಲ್ಲಿಯೇ ಬೆಳೆಯಬೇಕು. ತಂದೆತಾಯಿಯಿಂದ ಮಗು ದೂರವಾಗುತ್ತಿದ್ದಂತೆ ಸಂಬಂಧ, ಆತ್ಮೀಯತೆ ದೂರವಾಗಲು ಕಾರಣವಾಗುತ್ತದೆ. ಮಗುವಿನ ಮನಸ್ಸಿನಲ್ಲಿ ಅವರ ಪ್ರತಿ ಈ ರೀತಿಯ ಬೆಸುಗೆ, ಒಲವು ಅನೇಕ ಭಾವ ಕಡಿಮೆಯಾಗಬಹುದು.


ಸಾಮಾನ್ಯವಾಗಿ ಮಕ್ಕಳಿಗೆ ಮನೆಯಲ್ಲಿ ಹೆದರಿಸುವ, ಬೈಯುವ, ಪೀಡಿಸುವ, ಕೆಲವು ಆವಾಚ್ಯ ಶಬ್ಧ ಹಾಗು ಮಾತುಗಳನ್ನು ಬಳಸುವರು. ಅದು ತಪ್ಪಲ್ಲವೇ? ಬೆಳೆಯುವ ಆ ಮಗುವಿನ

ಮನಸ್ಸಿನಲ್ಲಿ ಈ ರೀತಿಯಾದಂತಹ ನಕಾರಾತ್ಮಕ ಭಾವನೆ ತುಂಬುವುದರಿಂದ ಅವನ/ಅವಳಲ್ಲಿ ಧೈರ್ಯ ಕುಂಠಿತಗೊಳ್ಳುತ್ತದೆ. ಮಗುವನ್ನು ಮಗುವಾಗಿರಲು ಬಿಡಿ. ಅದರ ಬಾಲ್ಯದ ಅನುಭವ ಅದು ಪಡೆಯಲಿ, ಆನಂದಿಸಲಿ. ಶಿಕ್ಷಣ ಅಥವಾ ಇತ್ಯಾದಿ ಅಂಶಗಳ ಬಗೆಗೆ ಆ ಮಗುವಿನ ಮೇಲೆ ಭಾರ ಹೊರಿಸುವುದು ಮಗುವಿನ ಶಾರೀರಿಕ, ಮಾನಸಿಕ ಹಾಗೂ ಭಾವನಾತ್ಮಕ ಬೆಳವಣಿಗೆ ಕುಂಠಿತವಾಗುತ್ತದೆ. ಈ ವಿಷಯಗಳು ಅನೇಕ ಸಂಶೋಧನೆಗಳಿಂದ ಕಂಡು ಬರುತ್ತದೆ.

ಒಬ್ಬ ನೌಕರಿ ಮಾಡುವವನು, ತನ್ನ ಪತ್ನಿಯ ಜೊತೆಗೂಡಿ, ತನ್ನ ತಾಯಿ ತಂದೆಯನ್ನು ಅನಾಥಾಶ್ರಮಕ್ಕೆ ಬಿಡಲು ಹೊರಟರು. ತಾಯಿಯ ಕಣ್ಣಲ್ಲಿ ನೀರು. ಆಗ ನೌಕರಿವಂತನ ಮಗು ತನ್ನ ತಂದೆಗೆ ಕೇಳಿತು. **"**ಡ್ಯಾಡಿ, ನಾನೂ ಕೂಡಾ ದೊಡ್ಡವನಾದ ಮೇಲೆ ನಿಮಗೂ ಹೀಗೆಯೇ ಅನಾಥಾಶ್ರಮಕ್ಕೆ ಕಳಿಸಬೇಕಾ?**"**

ಮಗುವಿನ ಮನಸ್ಸು ನೀರಿನ ಹಾಗೆ ನಿರ್ಮಲವಾಗಿರುತ್ತದೆ. ನಾವು ಅದರಲ್ಲಿ ಏನು ಸೇರಿಸುತ್ತೇವೆ, ಬೆರೆಸುತ್ತೇವೆಯೋ ಆ ರೀತಿ ಅದು ಹೊಸ ರೂಪ ಪಡೆದುಕೊಳ್ಳುತ್ತದೆ.

*Art By Maithily*



# Please Contact Bayalu Team

| Sl. No. | Name | Mail id |
|---|---|---|
| 1 | Raghavendra Herle G. | raghavendra.herle@azimpremjifoundation.org |
| 2 | Showrish Kudkuli | showrish.kudkuli@azimpremjifoundation.org |
| 3 | Benny Mathews | benny.mathews@azimpremjifoundation.org |
| 4 | Chikkaveeresha S. V. | chikkaveeresha.v@azimpremjifoundation.org |
| 5 | Lakshmidevi | lakshmidevi@azimpremjifoundation.org |
| 6 | Gopalakrishna Induguli | gopalakrishna@azimpremjifoundation.org |
| 7 | Yathiraj Sharma | yathiraj.sharma@azimpremjifoundation.org |
| 8 | Naganand GV | nagananda.gv@azimpremjifoundation.org |
| 9 | Ravi B T | ravi@azimpremjifoundation.org |
| 10 | Niranjan Sravade | niranjan.sarvade@azimpremjifoundation.org |
| 11 | Sudharshan K | sudharshan.k@azimpremjifoundation.org |

| | | |
|---|---|---|
| 12 | Shivaji | shivaji.ganpatrao@azimpremjifoundation.org |
| 13 | Lohit | lohitashwa.chamanoor@azimpremjifoundation.org |
| 14 | Giridhar Vaidya | giridhara.vaidya@azimpremjifoundation.org |
| 15 | Muzamimml | muzammil.mahaldar@azimpremjifoundation.org |
| 16 | Shivukumar | shivukumar@azimpremjifoundation.org |
| 17 | Gangadhar.Swamy | gangadhar.swamy@azimpremjifoundation.org |
| 18 | Pradeep Kumar | pradeep.kumar@azimpremjifoundation.org |
| 19 | Swathi Subramanya | swathi.subramanya@azimpremjifoundation.org |
| 20 | Shivakumara Swamy | shivakumara.swamy@azimpremjifoundation.org |
| 21 | Gundappa Katekar | gundappa.katekar@azimpremjifoundation.org |

**Thank you**